ಉಡುಪಿ ಜಿಲ್ಲೆ ಪಡುಬಿದ್ರಿಯಲ್ಲಿ ವಿದ್ಯುತ್ ಯೋಜನೆ

21(14) -ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಪಡುಬಿದ್ರಿಯಲ್ಲಿ ವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲಾಗಿದೆಯೇ; ಇದರ ಸಾಮರ್ಥ್ಯ ಎಷ್ಟು; ಈ ಯೋಜನೆಯನ್ನು ಯಾವಾಗಿನಿಂದ ಪ್ರಾರಂಭಿಸಲಾಗಿದೆ.

ಆ) ಆಗಿಲ್ಲದಿದ್ದರೆ ಕಾರಣಗಳೇನು;

ಇ) ಈ ವಿದ್ಯುತ್ ಯೋಜನೆಯನ್ನು ಯಾವ ಕಂಪನಿಗೆ ವಹಿಸಿಕೊಡಲಾಗಿದೆ;

ಈ) ಈ ವಿದ್ಯುತ್ ಕಂಪನಿಯ ಯೋಜನೆಯು ಪೂರ್ಣಗೊಂಡ ನಂತರ ಒಪ್ಪಂದ ಮಾಡಿಕೊಳ್ಳಲಾಗಿದೆಯೇ; ಪ್ರತಿ ಯೂನಿಟ್‌ಗೆ ವಿಧಿಸಿರುವ ದರ ಎಷ್ಟು.

ಶ್ರೀ ಬಸವರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಉಡುಪಿ ಜಿಲ್ಲೆ ಪಡಬಿದ್ರಿಯಲ್ಲಿ ಒಂದು ಶಾಖೋತ್ಪನ್ನ (ಕಲ್ಲಿದ್ದಲಾಧಾರಿತ) ವಿದ್ಯುತ್ ಘಟಕವನ್ನು ಸ್ಥಾಪಿಸಲು ಮೆಸರ್ಸ್ ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ಅನುಮತಿ ನೀಡಲಾಗಿದೆ. ಇದರ ಸಾಮರ್ಥ್ಯ 1015 ಮೆಗಾ ವ್ಯಾಟ್ (2X507.5 ಮೆಗಾ ವ್ಯಾಟ್ ಯೂನಿಟ್‌ಗಳು) ಈ ಯೋಜನೆಯ ನಿರ್ಮಾಣ ಕಾರ್ಯವನ್ನೂ ಪ್ರಾರಂಭವಾಗಿಲ್ಲ.

ಆ) ಮೆಸರ್ಸ್ ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್, ಇವರೊಡನೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲು ಸಲ್ಲಿಸಿರುವ ಕರಡು ಪ್ರತಿಯಲ್ಲಿ ಎಸ್ಕ್ರೋ ಹೊದಿಕೆ ಡೀಮಡ್ ಜನರೇಷನ್ ಹಾಗೂ ರಾಜ್ಯ ಖಾತರಿ ಕಾಲಂಗಳಿದ್ದು ಇವು ರಾಜ್ಯದ ಐ.ಪಿ.ಪಿ. ನೀತಿಗೆ ವಿರುದ್ಧವಾಗಿರುವುದರಿಂದ ರಾಜ್ಯ ಸರ್ಕಾರವು ವಿದ್ಯುತ್ ಖರೀದಿ ಒಪ್ಪಂದಕ್ಕೆ ಅನುಮೋದನೆ ನೀಡಿರುವುದಿಲ್ಲ. ರಾಜ್ಯ ಉಚ್ಚನ್ಯಾಯಾಲಯವು ಇದನ್ನು ಮರು ಪರಿಶೀಲಿಸಲು ಆದೇಶಿಸಿರುವುದರಿಂದ ಸದರಿ ವಿಷಯವು ಸರ್ಕಾರದ ಮರು ಪರಿಶೀಲನೆಯಲ್ಲಿದೆ.

ಇ) ಈ ವಿದ್ಯುತ್ ಯೋಜನೆಯನ್ನು ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್‌ರವರು ವಹಿಸಿಕೊಂಡಿದ್ದಾರೆ.

ಈ) ಕರ್ನಾಟಕ ಸರ್ಕಾರದ ಅನುಮೋದನೆ ದೊರೆತ ನಂತರ ವಿದ್ಯುತ್ ಖರೀದಿ ಒಪ್ಪಂದವನ್ನು ಮಾಡಿಕೊಳ್ಳಲಾಗುವುದು ಕ್ರಿಸಿಲ್ ಕನ್ಸಲ್ಟೆಂಟ್‌ರವರ ವರದಿಯಂತೆ ಪ್ರತಿ ಯೂನಿಟ್‌ಗೆ ಅಂದಾಜು ರೂ. 3.53 ಗಳಾಗಬಹುದು.

ದೇವನಹಳ್ಳಿ ಬಳಿ ನಿರ್ಮಿಸಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ

22(28) - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನ ಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?